**ಪಿ.ಡಬ್ಲ್ಯೂಃ** 01 (**ಕೆ ಎಸ್ ಶ್ರೀಧರ್**)

**ದಿನಾಂಕಃ 28.04.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರ ಪರ ಶ್ರೀ ಎಂ ವಿ ಕೆ.,ವಕೀಲರಿಂದ**

ಈ ಸಂಬಂಧವಾಗಿ ಎದುರುದಾರರ ಕಛೇರಿಯಲ್ಲಿ ಮರಣ ಪ್ರಮಾಣ ಪತ್ರವನ್ನು ಪಡೆಯಲು ಅರ್ಜಿ ಸಲ್ಲಿಸಿದಾಗ ದಿ. 16.06.2025 ರಂದು ಎದುರುದಾರರ ಕಛೇರಿಯವರು ನೀಡಿರುವ ಹಿಂಬರಹವನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.1 ಎಂದು, ವಂಶವೃಕ್ಷದ ನೋಟರೀಕೃತ ಪ್ರತಿಯನ್ನು ನಿ.ಪಿ 2 ಎಂದು, ದಿ. 18.04.2026 ರ ನಿವೇದನೆಯನ್ನು ನಿಪಿ–3 ಎಂದು, ಮಹಜರನ್ನು ನಿಪಿ–4 ಎಂದು, ತೆರಿಗೆ ನಿರ್ಧರಣಾ ಪಟ್ಟಿಯನ್ನು ನಿಪಿ–5 ಎಂದು, ಕಂದಾಯ ರಸೀದಿಯ ನೋಟರಿಕೃತ ಪ್ರತಿಯನ್ನು ನಿಪಿ–6 ಎಂದು, ಮರಣ ಪ್ರಮಾಣ ಪತ್ರದ ನೋಟರಿಕೃತ ಪ್ರತಿಯನ್ನು ನಿಪಿ–7 ಎಂದು, ಶಾಲಾ ವರ್ಗಾವಣಾ ಪ್ರಮಾಣ ಪತ್ರದ ನೋಟರಿಕೃತ ಪ್ರತಿಯನ್ನು ನಿಪಿ–8 ಎಂದು, 2 ಮರಣ ಪ್ರಮಾಣ ಪತ್ರದ ನೋಟರಿಕೃತ ಪ್ರತಿಯನ್ನು ನಿಪಿ–9 ಮತ್ತು 10 ಎಂದು, 6 ಆಧಾರ್ ಕಾರ್ಡ್ ಗಳ ನೋಟರೀಕೃತ ಪ್ರತಿಗಳನ್ನು ನಿ.ಪಿ 11 ರಿಂದ 16 ಎಂದು, ನ್ಯಾಯಾಯಲದ ಆದೇಶದ ಮೇರೆಗೆ ಕೋಲಾರ ಶಕ್ತಿ ಮತ್ತು ಕೋಲಾರ ಕಿರಣ ಕನ್ನಡ ದಿನ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿ.ಪಿ.17 ಮತ್ತು 18 ಎಂದು ಹಾಗೂ ಅವುಗಳಲ್ಲಿನ ಪ್ರಕಟಣೆಯ ಭಾಗವನ್ನು ನಿ.ಪಿಃ17(ಎ) ಮತ್ತು ನಿ.ಪಿಃ18(ಎ) ಎಂದು ಗುರುತಿಸಲಾಯಿತು. ಆದ್ದರಿಂದ ಅರ್ಜಿಯಲ್ಲಿ ಕೋರಿರುವ ಪ್ರಕಾರ ಆದೇಶ ಮಾಡಬೇಕಾಗಿ ಪ್ರಾರ್ಥನೆ.

**(ಎದುರುದಾರರು ಏಕಪಕ್ಷೀಯ ಆದ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.)**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.